ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, the 12th August, 1978/Shravana, 21, 1900 S.E.

The House met in the Assembly Chamber, Vidhana Soudha at Nine of the Clock.

[MR. SPEAKER (SRI P. VENKATARAMANA) in the Chair.]

OBITUARY REFERENCE

Re: Demise of Pope Paul VI of Rome

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್ (ಭಾರತೀನಗರ).—ಮಾನ್ಯ ಅಧ್ಯಕ್ಷರೇ, ಪೋಪ್ ಪಾಲ್‌ರವರ ನಿಧನದ ಬಗ್ಗೆ ಸಂತಾಪ ಸೂಚಿಸಲು ಈ ಒಂದು ಠರಾವನ್ನು ತಾವು ಈ ಸದನದ ಮುಂದೆ ಏನು ಇಟ್ಟಿದ್ದೀರಿ ಅದರ ಮೂಲಕ ಇಡೀ ಪ್ರಪಂಚದ ಜನತೆಯೊಂದಿಗೆ ನಾವೂ ಕೂಡ ಸಂತಾಪವನ್ನು ಸೂಚಿಸುವ ವಿಷಯದಲ್ಲಿ ಭಾಗವಹಿಸಿದ್ದೇವೆ ಎಂದು ನಾನು ತಿಳಿದುಕೊಂಡಿದ್ದೇನೆ. ಪೋಪ್ ಪಾಲ್‌ರವರ ಒಂದು ಆಶಯದಿಂದ ಮತ್ತು ಅವರು ತೋರಿಸಿದ ಒಂದು ಹೆಚ್ಚಿನ ಆಸಕ್ತಿಯಿಂದ ಈ ಬೆಂಗಳೂರು ನಗರದಲ್ಲಿ ಸೆಂಟ್ ಜಾನ್ ಮೆಡಿಕಲ್ ಕಾಲೇಜು ಸ್ಥಾಪನೆಯಾಯಿತು. ಪೋಪ್ ಪಾಲ್‌ರವರು ಎಲ್ಲಾ ಜನಾಂಗದವರಿಗೂ ಹೆಚ್ಚಾಗಿ ಬಡ ಜನರಿಗೆ ಸಹಾಯವಾಗುವ ರೀತಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುತ್ತಾ ಇದ್ದರು. ಅದೇರೀತಿಯಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳ ಮಧ್ಯೆ ಸೌಹಾರ್ದತೆಯನ್ನು ಹೆಚ್ಚಿಸಲು ಅವರು ಪ್ರಯತ್ನಪಟ್ಟಿದ್ದಾರೆ. He wanted brotherhood among all people. He was opposed to war. He strove hard to bring about a great deal of understanding amongst the different peoples of the world. He moved out from Italy as a roving ambassador of peace. He was the first Pope to leave the shores of his homeland and travel in different continents. He was even being referred to as the flying Pope. According to his own words he was an apostle on the move. We have done well today by paying our homage to this man of peace with this House also passing a resolution of condolence.

SRI D. DEVARAJ URS (Chief Minister).—It is a great shocking and sad news to hear the demise of Pope Paul. I fully associate myself with the sentiments expressed by the hon. member Sri Fernandes and I express my heartfelt condolences. I wish peace to the departed soul on behalf of the State of Karnataka.

SRI S. R. BOMMAI (Hubli).—I also associate with the sentiments expressed by the Chief Minister and the hon. member Sri Fernandes. I pay my homage to the great soul that has departed.

ಶ್ರೀ ಎಸ್. ಎಸ್. ಆರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಪೋಪ್ ಪಾಲ್‌ರವರ ನಿಧನ ಅಂತರರಾಷ್ಟ್ರೀಯ ಒಂದು ಜಗತ್ತಿಗೆ ಒಂದು ದೊಡ್ಡ ಹಾನಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಪೋಪ್ ಪಾಲ್‌ರವರು ಕಳೆದ ೧೫–೨೦ ವರ್ಷದವರೆಗೆ ಅವರ ಸೇವೆ ಇಡೀ ಮಾನವ ಕುಲಕ್ಕೆ ಒಂದು ಸಮರ್ಥನೀಯವಾದಂಥಾ ಮತ್ತು ಅವರು ಅಂತರಾಷ್ಟ್ರೀಯ ಜಗತ್ತಿನಲ್ಲಿ ಇರುವ ವಿವಿಧವಾದ ಇನ್ನೂ ಅನೇಕ ಮಾನವ ಕುಲಕ್ಕೆ ಧರ್ಮ ಗುರುಗಳ ವ್ಯಾಪ್ತಿಗೆ ಬಂದರು. ಅವರು ಮಾನವ ಜನಾಂಗದ ಉಳಿವಿಗಾಗಿ ಶಾಂತಿದೂತರಾಗಿ ಹೋರಾಡಿದ್ದಾರೆ. ಅವರು ಕೇವಲ ರೋಮನ್ ಕ್ಯಾಥೋಲಿಕ್ ಧರ್ಮ ಗುರುಗಳಾಗಿರದೆ ದೇಶದ ೮೦ ಕೋಟಿ ಜನಾಂಗಕ್ಕೆ ಅವರು ಧರ್ಮಗುರುಗಳಾಗಿದ್ದರು. ಅವರು ಇಡೀ ಮಾನವ ಕುಲಕ್ಕೆ ಧರ್ಮಗುರುಗಳಾಗಿ, ಶಾಂತಿದೂತರಾಗಿ ಕೆಲಸ ಮಾಡುತ್ತಿದ್ದರು. ಅವರ ಬಗ್ಗೆ ನಮ್ಮ ಈ ಮನೆಯ ಸದಸ್ಯರು ತಂದಿರತಕ್ಕಂಥಾ ಒಂದು ಸಂತಾಪ ಸೂಚಕ ನಿರ್ಣಯ ಏನು ಇದೆ ಅದು ಬಹಳ ಸಮಯೋಚಿತವಾದುದು ಎಂದು ಹೇಳಿ, ಇದರಲ್ಲಿ ನಾನೂ ಕೂಡ ನನ್ನ ಸಂಪೂರ್ಣ ಗೌರವವನ್ನು ಸೂಚಿಸುತ್ತೇನೆಂದು ಹೇಳಬಯಸುತ್ತೇನೆ.

SRI D. DEVARAJ URS.—On the 16th it appears Services will be held at Mangalore in connection with the demise of Pope Paul. Sri P. F. Rodriguas, Minister of State for Housing, will be present there on behalf of the Government.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ್).—ಮಾನ್ಯ ಅಧ್ಯಕ್ಷರೆ, ಪರಮಪೂಜ್ಯ ಪೋಪ್ ಪಾಲ್‌ರವರ ನಿಧನದ ಬಗ್ಗೆ ಈ ಸದನದಲ್ಲಿ ಏನು ಒಂದು ಸಂತಾಪಸೂಚಕದ ತರಾವನ್ನು ಇಟ್ಟಿದ್ದಾರೋ ಅದರಲ್ಲಿ ನಾನೂ ಕೂಡ ಸಂಪೂರ್ಣವಾಗಿ ಭಾಗಿಯಾಗುತ್ತೇನೆಂದು ಹೇಳುತ್ತೇನೆ. ಮುಖ್ಯವಾಗಿ ಪೋಪ್ ಪಾಲ್‌ರವರ ಪಾತ್ರ ಹೇಳಬೇಕಾದರೆ, ಅವರು ಯಾವರೀತಿ ಪಾತ್ರವನ್ನು ನಿರ್ವಹಿಸುತ್ತಾ ಇದ್ದರು ಎಂದರೆ, ಪ್ರಪಂಚದಲ್ಲಿರುವ ಎಲ್ಲಾ ಜನಾಂಗಗಳ ಐಕ್ಯತೆಗೆ ಹಾಗೂ ಇರತಕ್ಕಂಥಾ ವೈಶಮ್ಯಗಳನ್ನು ತೊಡೆದು ಹಾಕಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವಂತೆ ಕೆಲಸ ಮಾಡುತ್ತಾ ಇದ್ದರು. ಇಡೀ ಪ್ರಪಂಚದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೆ ಏನು ಒಂದು ಕಾರ್ಯ ನಡೆಯುತ್ತಾ ಇತ್ತು ಅದರಲ್ಲಿ ಇವರು ಬಹು ಮುಖ್ಯವಾದ ಪಾತ್ರವನ್ನು ವಹಿಸಿಕೊಂಡು ಆ ಶಾಂತಿಯನ್ನು ನೆಲೆಗೊಳಿಸುವುದರಲ್ಲಿ ಒಂದು ಆಶೆಯನ್ನು ವ್ಯಕ್ತಪಡಿಸಿ ಕೆಲಸ ಮಾಡುತ್ತಿದ್ದರು. ಇವರು ಈ ರೀತಿಯಾಗಿ ಏನು ಒಂದು ಕೆಲಸ ಮಾಡಿಕೊಂಡು ಹೋಗುತ್ತಾ ಇದ್ದರು ಅಂಥಾವರನ್ನು ನಾವು ಇವತ್ತಿನ ದಿವಸ ಕಳೆದುಕೊಂಡಿದ್ದೇವೆ. ಅಂಥಾ ಒಬ್ಬ ಶಾಂತಿದೂತನನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಅವರ ಈ ಒಂದು ನಿಧನದಿಂದ ಪ್ರಪಂಚದಲ್ಲಿ ಎಲ್ಲಾ ಕಡೆಯೂ ಇದರ ಬಗ್ಗೆ ಸಂತಾಪಸೂಚಕವನ್ನು ವ್ಯಕ್ತಪಡಿಸಿರುವುದಲ್ಲದೆ ಈ ಮನೆಯ ಸದಸ್ಯರೂ ಕೂಡ ಅವರ ಬಗ್ಗೆ ಏನು ಒಂದು ಸಂತಾಪಸೂಚಕವನ್ನು ಇಂದು ವ್ಯಕ್ತಪಡಿಸಿದ್ದಾರೋ ಇದು ಬಹಳ ಸಮಯೋಚಿತವಾದುದು ಎಂದು ಹೇಳಿ ಇದರಲ್ಲಿ ನಾನೂ ಕೂಡ ತಮ್ಮ ಜೊತೆಗೆ ಸೇರುತ್ತೇನೆಂದು ಹೇಳಬಯಸುತ್ತೇನೆ.

† SRI WILLIAM ST. JOHN S MARLEY (Nominated).—Hon. Speaker, I would like to identify myself with the sentiments expressed by the previous speakers with r gard to the demise of Pope Paul. Pope Paul was not only a great Christian leader but he was really the leader of the world and in his passing away I feel the world has lost a great person. Of course these things are inevitable. Life is like that and some day or the other we have to pass on. But in the passing away of Pope Paul he has left a mark which I am sure all people around the world will appreciate, whether Christian or non-christian or muslim or whoever they might be.

---

† Indicate that remarks or speeches have not been revised by the Members concerned.

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಕ್ರಿಶ್ಚಿಯನ್ ಜನಾಂಗದ ೭೦ ಕೋಟಿ ಜನರ ಧರ್ಮಗುರುಗಳಾದ ಪೋಪ್ ಪಾಲ್‌ರವರು ಶಾಂತಿಗಾಗಿ ಅಪಾರವಾಗಿ ಶ್ರಮಿಸಿ ೮೦ ವರ್ಷಗಳ ತುಂಬು ಜೀವನ ನಡೆಸಿದಂಥಾವರು ಇಂದು ನಿಧನರಾಗಿದ್ದಾರೆ. ಅವರ ನಿಧನದಿಂದಾಗಿ ಇಡೀ ಜಗತ್ತು ದುಃಖಿತಪ್ತವಾಗಿದೆ ಮತ್ತು ಇಡೀ ಕರ್ನಾಟಕ ವಿಧಾನಸಭೆ ಈಪ್ಪೊತ್ತಿನ ದಿವಸ ಅವರ ಬಗ್ಗೆ ಏನು ಒಂದು ದುಃಖಿವಮ್ನು ವ್ಯಕ್ತಪಡಿಸಿದೆ ಇದು ಬಹಳ ಸಮಯೋಚಿತವಾಗಿದೆ. ಪೋಪ್ ಪಾಲ್‌ರವರ ಜೀವನದ ಸಾಧನೆ ಅತ್ಯಂತ ಅಮೂಲ್ಯವಾದುದು ಎಂದು ಹೇಳುತ್ತೇನೆ. ಹೇಗೆಂದರೆ, ಜಗತ್ತಿನಲ್ಲಿ ಇಬ್ಬಣ ಆದ ಕಾಲದಲ್ಲಿ ಅವರು ಹೆಚ್ಚಿನ ಒದು ಪಾತ್ರವನ್ನು ವಹಿಸಿ ಆ ಇಬ್ಬಣವನ್ನು ಒಂದುಗೂಡಿಸಿ ಇಡೀ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಸಾಧನೆ ಮಾಡಿದಂಥಾ ಶಾಂತಿ ಪುರಷರು. ಈ ಇಬ್ಬಣ ಕಾಲದಲ್ಲಿ ಧರ್ಮಕ್ಕೆ ದೂರ ಇದ್ದರೂ ಕೂಡ ಅವರು ರಾಷ್ಟ್ರದ ಒಂದು ನಾಯಕತ್ವವನ್ನು ವಹಿಸಿ ರಷ್ಯಾದ ನಾಯಕರುಗಳಿಗೂ ಕೂಡ ಧರ್ಮಗುರುಗಳಾಗಿ ಪೋಪ್ ಪಾಲ್‌ರವರು ಮಾಡಿದಂಥಾ ಕೆಲಸ ಬಹಳ ಅಪಾರವಾದುದು. ಅವರು ಈರೀತಿಯಾಗಿ ಹೋರಾಡಿ ಈ ಧರ್ಮದ ಒಂದುಪ್ರತಿಭೆ ಎಷ್ಟರಮಟ್ಟಿಗೆ ಈ ಮಾನವ ಜನಾಂಗದ ಮೇಲೆ ಆಗುತ್ತದೆ ಎನ್ನುವುದನ್ನು ಅವರು ವ್ಯಕ್ತಪಡಿಸಿ ಅವರ ಮನಸ್ಸನ್ನು ಶಾಂತಿಗೊಳಿಸಿ ಮತ್ತು ಅವರು ಧರ್ಮದ ಬಗ್ಗೆ ತಮ್ಮ ಪ್ರಭಾವ ಬೀರಿದ್ದಾರೆ. ಅಂಥಾ ವ್ಯಕ್ತಿ ಈಪ್ಪೊತ್ತಿನ ದಿವಸ ನಮ್ಮ ಕಣ್ಣುಮುಂದೆ ಇಲ್ಲದವರಾಗಿದ್ದಾರೆ.

ಜೊತೆಗೆ ಭಾರತದಲ್ಲಿ ನಡೆದಂಥ ಅನೇಕ ದುರ್ಘಟನೆಗಳಲ್ಲಿ ಸಂಪೂರ್ಣವಾದ ಆರ್ಥಿಕ ಸಾಮಾಜಿಕ ಸಹಾಯವನ್ನು ಒದಗಿಸಿದಂಥ ಮಹಾಪುರುಷರು ಇಂದು ಕಣ್ಮರೆಯಾಗಿದ್ದಾರೆ. ಹಾಗೇನೇ ಅವರ ಜೀವನ ಮೌಲ್ಯವನ್ನು ನಾವು ನೋಡುವುದಾದರೆ ಅವರು ಮೊನ್ನೆ ದಿವಸ ನಿಧನರಾಗುವುದಕ್ಕೆ ಮುನ್ನ ಅವರು ಬರೆದಿಟ್ಟ ಮರಣ ಶಾಸನವನ್ನು ನೋಡಿದಾಗ ಗೊತ್ತಾಗುತ್ತದೆ. ನನ್ನ ಅಂತ್ಯಕ್ರಿಯೆ ಅತ್ಯಂತ ಸರಳವಾಗಿರಬೇಕು ನನಗೆ ಯಾವುದೇ ಸ್ಮಾರಕಗಳನ್ನು ರಚನೆ ಮಾಡಬಾರದೆಂದು ಬರೆದಿಟ್ಟು ಹೋಗಿದ್ದಾರೆ ಇವತ್ತು ಭಾರತ ಸರ್ಕಾರದವರು ಅವರ ಸೇವೆಯನ್ನು ಸಮರ್ಥನೆ ಮಾಡಿಕೊಳ್ಳುವ ಸಲುವಾಗಿ ಭಾರತದ ಎಲ್ಲಾ ಸರ್ಕಾರಿ ಕಛೇರಿಗಳ ಮೇಲೆ ತನ್ನ ರಾಷ್ಟ್ರಧ್ವಜವನ್ನು ಅರ್ಧದವರೆಗೆ ಹಾರಿಸಬೇಕೆಂದು ನಿರ್ಣಯ ಮಾಡಿ ಇಡೀ ಭಾರತದ ಜನತೆಯ ಅನುತಾಪವನ್ನು ವ್ಯಕ್ತಪಡಿಸುವ ಸೂಚನೆ ಕೊಟ್ಟಿದ್ದಾರೆ. ಜಗತ್ತಿನ ಮಹಾನ್‌ವ್ಯಕ್ತಿ ಎನ್ನಿಸಿಕೊಂಡಿದ್ದಂಥ ಪೋಪ್‌ಪಾಲ್‌ರವರ ನಿಧನಕ್ಕೆ ನನ್ನ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಕೋರಿ ದುಃಖಿತಪ್ತರಾದ ಅವರ ಮನೆಯವರಿಗೆ ಇಡೀ ಭಾರತ ದೇಶದ ಜನಾಂಗದ ಪರವಾಗಿ ಸಹಕಾರ ವ್ಯಕ್ತಪಡಿಸಿ ನನ್ನ ಈ ಸಂತಾಪವನ್ನು ಸೂಚಿಸಬಯಸುತ್ತೇನೆ.

MR. SPEAKER.—I associate myself with the feelings expressed by the Hon'ble the Leader of the house, Hon'ble the Leader of the opposition and other members of this house. I pray almighty to give peace to the departed soul.

I request the hon. members to stand in silence for a minute as a mark of respect to the departed soul.

(The House stood in silence for a minute)

STARRED QUESTIONS

(to which oral answers were given)

Decrease in production in Textile Mills due to power cut

245. SRI B. V. KAKKILAYA (Vittal).—Will the Minister for Industries and Commerce be pleased to state.—

(a) in how many Textile Mills has the production decreased due to power cut in the State ;